I am producing the court certified copy of the sale deed dated 04.08.1970 executed by Gowdara Annayyappa, Ramu and Hanumanthappa in favor of Sri. Ananta Narayana and also produced the typed copy of the same and it is marked as **Ex.D.109** and typed copy is marked as **Ex.D.109(a)**.

I am producing the court certified copy of the sale deed dated 30.06.1980 executed by R.Ananta Narayana in favor of Srinivasa Murthy and also produced the typed copy of the same and it is marked as **Ex.D.110** and typed copy is marked as **Ex.D.110(a)**.

(For cross examination).

(Computerized to my dictation in the open court as deposed by the witness.)

**R. O. I. & A. C.,**

**(MAMTAZ)**
**IX Addl. C.C. & S.J., Bengaluru.**

**ದಿಃ-03-02-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಪಾಟಿಸವಾಲು ಃ ವಾದಿ ಪರ ಶ್ರೀ. ಸಿ.ಹೆಚ್.ಆರ್ ವಕೀಲರಿಂದ ಃ**

1. ವಾದಿಗಳು ನನಗೆ ಗೊತ್ತಿರುತ್ತಾರೆ. ಅವರು ಹನುಮಂತಪ್ಪನವರ ಮಕ್ಕಳಾಗಿರುತ್ತಾರೆ. ನನಗೆ ಹನುಮಂತಪ್ಪನವರ

ಮಕ್ಕಳು ಮತ್ತು ಅವರ ತಮ್ಮ ಗೌಡರ ಅಣ್ಣಯ್ಯಪ್ಪ ಮತ್ತು ಅವರ ಮಕ್ಕಳ ಬಗ್ಗೆ ಗೊತ್ತಿದೆ. ಗೌಡರ ಅಣ್ಣಯ್ಯಪ್ಪನಿಗೆ ರಾಮಪ್ಪ ಎಂಬ ಒಬ್ಬ ಮಗನಿದ್ದು ಅವನು ಈ ದಾವೆಯ 2 ನೇ ಪ್ರತಿವಾದಿಯಾಗಿರುತ್ತಾರೆ. ಅವರೆಲ್ಲರು ಕದಿರೇನಹಳ್ಳಿ ಗ್ರಾಮದಲ್ಲಿ ವಾಸವಾಗಿದ್ದಾರೆ.

2. ಹನುಮಂತಪ್ಪ ಮತ್ತು ಗೌಡರ ಅಣ್ಣಯ್ಯಪ್ಪ ಮತ್ತು ಅವರು ಕುಟುಂಬಗಳು ಒಟ್ಟು ಕುಟುಂಬದಲ್ಲಿ ಇದ್ದರು ಎಂದರೆ ಸರಿಯಲ್ಲ. ಹನುಮಂತಪ್ಪ ಮತ್ತು ಗೌಡರ ಅಣ್ಣಯ್ಯಪ್ಪ ಅವರಿಬ್ಬರನ್ನು ಬಿಟ್ಟರೆ ಅವರಿಗೆ ಬೇರೆ ಸಹೋದರ ಸಹೋದರಿಯರು ಇದ್ದಾರಾ ಎಂದರೆ ನನಗೆ ಗೊತ್ತಿಲ್ಲ. ಹನುಮಂತಪ್ಪ ಮತ್ತು ಗೌಡರ ಅಣ್ಣಯ್ಯಪ್ಪ ಮತ್ತು ಅವರು ಕುಟುಂಬಗಳು ಒಟ್ಟು ಕುಟುಂಬದಲ್ಲಿ ಒಂದೇ ಮನೆಯಲ್ಲಿ ಇದ್ದರು ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರಿದು ಹನುಮಂತಪ್ಪ ತೀರಿಹೋದ ಮೇಲೆ ಅವರು ಬೇರೆ ಬೇರೆ ಮನೆಗಳಲ್ಲಿ ವಾಸವಿದ್ದರು ಎಂದು ನುಡಿಯುತ್ತಾರೆ. ಅವರು ಬೇರೆ ಬೇರೆ ಮನೆಗಳಲ್ಲಿ ವಾಸವಿದ್ದರು ಎಂದು ಹೇಳಲು ಅವರ ಮನೆ ನಂಬರುಗಳು ನನಗೆ ಗೊತ್ತಿಲ್ಲ ಮತ್ತು ಅವರು ಬೇರೆ ಬೇರೆ ಮನೆಯಲ್ಲಿ ವಾಸವಿದ್ದರು ಎಂದು ಅವರೇ ನನಗೆ ಹೇಳಿದ್ದರಿಂದ ಗೊತ್ತಿರುತ್ತದೆ.

3. ಹನುಮಂತಪ್ಪ ಮತ್ತು ಗೌಡರ ಅಣ್ಣಯ್ಯಪ್ಪನವರ ಕುಟುಂಬಗಳು ಕದಿರೇನಹಳ್ಳಿಯಲ್ಲಿ ವಾಸವಿದ್ದರು. ಯಾವ ಅಡ್ಡರಸ್ತೆಯಲ್ಲಿ ವಾಸವಿದ್ದರು ಎಂದು ನನಗೆ ಗೊತ್ತಿಲ್ಲ.

4. ಹನುಮಂತಪ್ಪ ಮತ್ತು ಗೌಡರ ಅಣ್ಣಯ್ಯಪ್ಪನವರ ಕುಟುಂಬಗಳು ನಡುವೆ ಯಾವುದೇ ವಿಭಾಗ ಪತ್ರವಾದ ಬಗ್ಗೆ ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರಿದು ಅದು ಯಾವಾಗ ಎಂದು ಕೇಳಿದರೆ ನಾನು ಹೇಳಬಹುದು ಎಂದು ನುಡಿಯುತ್ತಾರೆ. ನಾನು ಹೋಗುವ ಮೊದಲು ಅವರು ಏನು ಮಾಡಿಕೊಂಡಿದ್ದಾರೆ ಎಂದು ನನಗೆ ಗೊತ್ತಿಲ್ಲ ನಾನು ಹೋದ ನಂತರ ಅಂತಹ ಯಾವುದೇ ವಿಭಾಗ ಪತ್ರ ಮಾಡಿಕೊಂಡಿಲ್ಲ ಎಂದು ನುಡಿಯುತ್ತಾರೆ. ಅವರು ಯಾವುದೇ ವಿಭಾಗ ಪತ್ರವನ್ನು ಮಾಡಿದಂತಹ ದಾಖಲೆಯನ್ನು ನಾನು ನೋಡಿರುವುದಿಲ್ಲ.

5. ಹನುಮಂತಪ್ಪ ಮತ್ತು ಗೌಡರ ಅಣ್ಣಯ್ಯಪ್ಪನವರ ಹೆಸರಿನಲ್ಲಿ ಯಾವುದು ಯಾವುದು ಸ್ವತ್ತುಗಳು ಇದೇ ಎಂಬುದು ನನಗೆ ಗೊತ್ತಿಲ್ಲ. ಹನುಮಂತಪ್ಪ ಮತ್ತು ಗೌಡರ ಅಣ್ಣಯ್ಯಪ್ಪನವರು ಮತ್ತು ಅವರ ಕುಟುಂಬದವರು ಸರ್ವೇ ನಂ.9 ರ 6 ಎಕರೆ 18 ಗುಂಟೆ ಕದಿರೇನಹಳ್ಳಿ ಗ್ರಾಮದ ಸ್ವತ್ತಿನ ಮಾಲೀಕರು ಎಂದರೆ ಸರಿ. ಸಾಕ್ಷಿ ಮುಂದುವರಿದು ನಾನು ಹೋಗುವಾಗ ಎಲ್ಲಾ ಸ್ವತ್ತುಗಳನ್ನು ಮಾರಾಟ ಮಾಡಿದ್ದು ಅದರಲ್ಲಿ ನನಗೆ ಕೊನೆಯದಾಗಿ ಒಂದು ಸ್ವತ್ತನ್ನು ಮಾರಾಟ ಮಾಡಿರುತ್ತಾರೆ ಎಂದು ನುಡಿಯುತ್ತಾರೆ.

6. ನಾನು 6 ಎಕರೆ 18 ಗುಂಟೆಯ ಸ್ವತ್ತನ್ನು ನೋಡಿರುವುದಿಲ್ಲ ಆದರೆ ಆ ಬಗ್ಗೆ ಗೊತ್ತು. 6 ಎಕರೆ 18 ಗುಂಟೆಯ ಚೆಕ್ಕುಬಂದಿ ನನಗೆ ಗೊತ್ತಿರುವುದಿಲ್ಲ.

7. ನಾನು ಮತ್ತು ತಂದೆ, ತಾಯಿ, ಅಣ್ಣ, ತಮ್ಮಂದಿರು ಒಟ್ಟು 8 ಸೈಟುಗಳನ್ನು ಖರೀದಿ ಮಾಡಿರುತ್ತೇವೆ. ಅಲ್ಲದೇ ದಿನಾಂಕ 18.12.1980 ರಂದು 30 ಗುಂಟೆ ಜಾಗವನ್ನು ಅವರಿಂದ ಖರೀದಿ ಮಾಡಿರುತ್ತೇವೆ.

8. ಸರ್ವೇ ನಂ.6/2 ಕದಿರೇನಹಳ್ಳಿ ಗ್ರಾಮದ 1 ಎಕರೆ 7 ಗುಂಟೆಗೆ ಹನುಮಂತಪ್ಪ ಮತ್ತು ಗೌಡರ ಅಣ್ಣಯ್ಯಪ್ಪ ಮತ್ತು ಅವರ ಕುಟುಂಬದವರೇ ಮಾಲೀಕರು ಎಂದರೆ ಸರಿಯಲ್ಲ. ಸರ್ವೇ ನಂ.6/2 ಮತ್ತು ಸರ್ವೇ ನಂ.9 ರ ಸ್ವತ್ತು ಒಂದಕ್ಕೊಂದು ತಾಗಿಕೊಂಡು ಇದೆ ಎಂದರೆ ಸರಿಯಲ್ಲ. ಸರ್ವೇ ನಂ.6/2 ರಲ್ಲಿ ಹನುಮಂತಪ್ಪ ಮತ್ತು ಗೌಡರ ಅಣ್ಣಯ್ಯಪ್ಪ ಮತ್ತು ಅವರ ಕುಟುಂಬದವರು ಮಾಲೀಕರಲ್ಲ ಎಂದು ನನಗೆ ಹೇಗೆ ಗೊತ್ತಾಗಿದೆ ಎಂದರೆ ಅದು ವಿಜಯಲಕ್ಷ್ಮಿ ಎಂಬುವವರ ಹೆಸರಿನಲ್ಲಿ ಸರ್ವೇ ನಂ.6/2 ರ 1 ಎಕರೆ ಸ್ವತ್ತು ಇರುವುದರ ಬಗ್ಗೆ ನಾನು ಅವರ ಕ್ರಯ ಪತ್ರವನ್ನು ನೋಡಿರುತ್ತೇನೆ ಎಂದು ನುಡಿಯುತ್ತಾರೆ. ವಿಜಯಲಕ್ಷ್ಮಿ ಯಾರು ಎಂದು ನನಗೆ ಗೊತ್ತಿಲ್ಲ ಆದರೆ ಬೇರೆಯವರು ನೋಡಿದ್ದರಿಂದ ಕ್ರಯ ಪತ್ರವನ್ನು ನೋಡಿರುತ್ತೇನೆ. ಆ ಕ್ರಯ ಪತ್ರವನ್ನು ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ. ಸಾಕ್ಷಿ ಮುಂದುವರಿದು ಅದನ್ನು ನಾನು ಕೇವಲ ನೋಡಿರುತ್ತೇನೆ ಎಂದು ನುಡಿಯುತ್ತಾರೆ. ಸರ್ವೇ ನಂ.6/2 ರ 1 ಎಕರೆ 7 ಗುಂಟೆಗೆ ಹನುಮಂತಪ್ಪ ಮತ್ತು ಗೌಡರ ಅಣ್ಣಯ್ಯಪ್ಪ ಮತ್ತು ಅವರ ಕುಟುಂಬದವರೇ ಮಾಲೀಕರು ಎಂದರೆ ಸರಿಯಲ್ಲ.

9. ಹನುಮಂತಪ್ಪನವರನ್ನು ನಾನು ನೋಡಿರುವುದಿಲ್ಲ ಆದರೆ ಗೌಡರ ಅಣ್ಣಯ್ಯಪ್ಪನವರನ್ನು ನಾನು ನೋಡಿರುತ್ತೇನೆ. ಹನುಮಂತಪ್ಪನವರನ್ನು ನಾನು ನೋಡಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ನಾನು ಹೋಗುವ ಮೊದಲೇ ಅವರು ಮೃತ ಪಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಹನುಮಂತಪ್ಪನವರು ಮರಣ ಹೊಂದುವ ಮೊದಲು ಹನುಮಂತಪ್ಪ ಮತ್ತು ಗೌಡರ ಅಣ್ಣಯ್ಯಪ್ಪ ಮತ್ತು ಅವರ ಕುಟುಂಬದವರು ಒಂದೇ ಮನೆಯಲ್ಲಿ ವಾಸ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಈ ಬಗ್ಗೆ ವಾದಿಯವರು ನನಗೆ ತಿಳಿಸಿದ್ದರಿಂದ ನನಗೆ ಈ ವಿಚಾರ ಗೊತ್ತು. ಅವರು ಒಟ್ಟು ಕುಟುಂಬದಲೇ ಇದ್ದರು ಮತ್ತು ಗೌಡರ ಅಣ್ಣಯ್ಯಪ್ಪನವರು ಕುಟುಂಬವನ್ನು ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ಹನುಮಂತಪ್ಪನವರು ವಿದ್ಯಾವಂತರಲ್ಲ ಎಂದರೆ ನನಗೆ ಆ ಬಗ್ಗೆ ಗೊತ್ತಿಲ್ಲ. ಗೌಡರ ಅಣ್ಣಯ್ಯಪ್ಪನವರು ಓದಿದ್ದರು ಮತ್ತು ಹನುಮಂತಪ್ಪನವರು ವ್ಯವಸಾಯ ಮಾಡಿಕೊಂಡು ಒಂದೇ ಮನೆಯಲ್ಲಿ ಇದ್ದರು ಎಂದರೆ ಆ ಬಗ್ಗೆ ನನಗೆ ಗೊತ್ತಿಲ್ಲ.

10. ನಾನು ಮತ್ತು ನನ್ನ ಕಟುಂಬದವರು 8 ನಿವೇಶನಗಳನ್ನು ಖರೀದಿಸಿದ ಬಗ್ಗೆ ದಾಖಲೆಗಳನ್ನು ನಾನು ಹಾಜರುಪಡಿಸಿರುತ್ತೇನೆ. ಸಾಕ್ಷಿ ಮುಂದುವರಿದು ನಾನು ಲೇಔಟ್ ಪ್ಲಾನನ್ನು ಹಾಜರು ಪಡಿಸಿರುತ್ತೇನೆ ಎಂದು ನುಡಿಯುತ್ತಾರೆ. ಆ ಲೇಔಟನ್ನು ಗೌಡರ ಅಣ್ಣಯ್ಯಪ್ಪನವರು ಮತ್ತು ಹನುಮಂತಪ್ಪನವರು ಸೇರಿ ಮಾಡಿದ್ದು ಒಟ್ಟು 86 ಸೈಟುಗಳನ್ನು

ಮಾಡಿರುತ್ತಾರೆ. ನಮಗೆ ಮಾರಿದ 8 ಸೈಟುಗಳನ್ನು ವಾದಿಗಳು ಸಹ ನಮಗೆ ಮಾರಾಟ ಮಾಡಿರುತ್ತಾರೆ. ಸಾಕ್ಷಿ ಮುಂದುವರಿದು ಅವರ ತಾಯಿ ಅಕ್ಕಯ್ಯಮ್ಮನವರು ಮಾರಾಟ ಮಾಡಿದ್ದು ಆ ಸಮಯದಲ್ಲಿ ವಾದಿಗಳು ಅಪ್ರಾಪ್ತರಾಗಿದ್ದರು ಎಂದು ನುಡಿಯುತ್ತಾರೆ. ಅದಲ್ಲದೇ ಗೌಡರ ಅಣ್ಣಯ್ಯಪ್ಪನವರು ಮತ್ತು ಅವರ ಮಗ ಕೂಡ ಮಾರಾಟ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಗೌಡರ ಅಣ್ಣಯ್ಯಪ್ಪನವರು ಮತ್ತು ಅವರ ಮಗ ನಮಗೆ ಮಾರಾಟ ಮಾಡುವಾಗ ಅವರು ಒಟ್ಟು ಕುಟುಂಬದಲ್ಲಿದ್ದರೋ ಅಥವಾ ಬೇರೆ ಬೇರೆ ಇದ್ದರೋ ನನಗೆ ಗೊತ್ತಿಲ್ಲ ಆದರೆ ಅವರಿಬ್ಬರೂ ಸಹ ಸೇರಿ ನಮಗೆ ಮಾರಾಟ ಮಾಡಿರುತ್ತಾರೆ.

11. ದಿನಾಂಕ 31.07.1980 ರಲ್ಲಿ ಕದಿರೇನಹಳ್ಳಿ ಗ್ರಾಮದ ಸರ್ವೇ ನಂ.9 ರ ಸೈಟ್ ನಂ.83, 84 ಮತ್ತು 85, 86 ಮಾರಾಟ ಮಾಡಿರುತ್ತಾರೆ. ಉಳಿದ ಸೈಟ್ ನಂಬರುಗಳು ನನಗೀಗ ನೆನಪಿಗೆ ಬರುತ್ತಿಲ್ಲ. ವಾದಿಗಳು ಈ ಕ್ರಯ ಪತ್ರದಲ್ಲಿ ಸಹಿಯನ್ನು ಹಾಕಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರಿದು ಅವರು ಅಪ್ರಾಪ್ತರಾಗಿದ್ದರಿಂದ ಅವರ ತಾಯಿ ಅಕ್ಕಯ್ಯಮ್ಮನವರು ಅಪ್ರಾಪ್ತರ ಪರವಾಗಿ ಸಹಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಅವರು ಮಾಡಿದ ಕ್ರಯ ಪತ್ರ ಕದಿರೇನಹಳ್ಳಿ ಗ್ರಾಮದ ಸರ್ವೇ ನಂ.9 ರ ಸೈಟ್ ನಂ.83, 84 ಮತ್ತು 85, 86 ಆಗಿರುತ್ತದೆ. ಉಳಿದ ಸೈಟ್ ನಂಬರುಗಳು ನನಗೀಗ ನೆನಪಿಗೆ ಬರುತ್ತಿಲ್ಲ. ಆ ಕ್ರಯ ಪತ್ರದಲ್ಲಿ ವಾದಿಗಳು ಅಪ್ರಾಪ್ತರು ಎಂದು ಹೇಳಿ ಅವರ

ವಯಸ್ಸುಗಳನ್ನು ನಮ್ಮ ಕ್ರಯ ಪತ್ರದಲ್ಲಿ ನಮೂದಿಸಿರುತ್ತಾರೆ. ಅಕ್ಕಯ್ಯಮ್ಮನವರ ಮಕ್ಕಳು ಆ ಸಮಯದಲ್ಲಿ ಅಪ್ರಾಪ್ತರಾಗಿರಲಿಲ್ಲ ಮತ್ತು ಆ ಕ್ರಯ ಪತ್ರಗಳಿಗೆ ಅವರು ಸಹಿ ಮಾಡಿಲ್ಲ ಎಂದರೆ ಸರಿಯಲ್ಲ. ಕ್ರಯ ಪತ್ರದಲ್ಲಿ ಅಕ್ಕಯ್ಯಮ್ಮನವರ ಮಕ್ಕಳ ವಯಸ್ಸು ಕ್ರಯ ಪತ್ರ ಮಾಡುವ ಸಂದರ್ಭದಲ್ಲಿ ಎಷ್ಟಿತ್ತು ಎಂದು ನನಗೆ ಈಗ ಹೇಳಲಾಗುವುದಿಲ್ಲ.

12. ಅಕ್ಕಯ್ಯಮ್ಮ ಯಾವಾಗ ತೀರಿಹೋಗಿದ್ದಾರೆ ಎಂದು ನನಗೆ ಈಗ ನೆನಪಿಲ್ಲ. ಅವರ ಗಂಡ ಯಾವಾಗ ಮೃತ ಪಟ್ಟಿದ್ದಾರೆ ಎಂದು ನನಗೆ ನಿಖರವಾಗಿ ಹೇಳಲಾಗುವುದಿಲ್ಲ ಆದರೆ ಅವರು ನಾನು ಹೋಗುವ ಮೊದಲೇ ಮೃತಪಟ್ಟಿರುತ್ತಾರೆ.

13. ನಮಗೆ ಆ 8 ನಿವೇಶನಗಳನ್ನು ಮಾರುವ ಸಂದರ್ಭದಲ್ಲಿ ಅದು ಗ್ರಾಮ ಪಂಚಾಯತಿ ವ್ಯಾಪ್ತಿಗೆ ಬರುತ್ತಿತ್ತು. ಅದು ಬಹುಶಃ ಉತ್ತರಹಳ್ಳಿ ಗ್ರಾಮ ಪಂಚಾಯತಿ ಕದಿರೇನಹಳ್ಳಿ ಗ್ರಾಮಕ್ಕೆ ಬರುತ್ತಿತ್ತು. ಆ ಲೇಔಟ್ ಪ್ಲಾನುಗಳನ್ನು ಉತ್ತರಲ್ಲಿ ಗ್ರಾಮ ಪಂಚಾಯತಿಯಲ್ಲಿ ಮಾಡಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ ಆದರೆ ಲೇಔಟ್ ಪ್ಲಾನನ್ನು ನಾನು ಹಾಜರು ಪಡಿಸಿರುತ್ತೇನೆ. ಆ ಲೇಔಟ್ ಪ್ಲಾನನ್ನು ಯಾವ ಅಧಿಕಾರಿ ಮಂಜೂರಾತಿ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ ಅವರು ಲೇಔಟ್ ಪ್ಲಾನನ್ನು ಮತ್ತು ಸೈಟನ್ನು ತೋರಿಸಿದ್ದಾರೆ ಎಂದು ನುಡಿಯುತ್ತಾರೆ. ಲೇಔಟ್ ಪ್ಲಾನನ್ನು ಯಾವಾಗ ಮಾಡಿ ಮಂಜೂರಾತಿ ಪಡೆದಿದ್ದಾರೇ ಎಂದು ನನಗೆ ಈಗ ಹೇಳಲು ನೆನಪಾಗುತ್ತಿಲ್ಲ.

14. ಕ್ರಯ ಪತ್ರವು ನಮ್ಮ ಹೆಸರಿನಲ್ಲಿ ನೊಂದಣಿಯಾದ ನಂತರ ನಮ್ಮ ಹೆಸರಿನಲ್ಲಿ ಗ್ರಾಮ ಪಂಚಾಯತಿಯಲ್ಲಿ ಖಾತಾ, ಕಂದಾಯ ರಶೀದಿಗಳು ಆದ ಬಗ್ಗೆ ದಾಖಲೆ ಇಲ್ಲ. ನಾವು ಸ್ವತ್ತುಗಳನ್ನು ಖರೀದಿ ಮಾಡುವಾಗ ಲೇಔಟ್ ಪ್ಲಾನುಗಳನ್ನು ನೋಡಿ ಖರೀದಿ ಮಾಡಿರುತ್ತೇವೆ. ಲೇಔಟ್ ಪ್ಲಾನುಗಳನ್ನು ಬಿಟ್ಟು ಬೇರೆ ಯಾವುದೇ ದಾಖಲೆಯನ್ನು ಪಡೆದಿರುವುದಿಲ್ಲ ಮತ್ತು ಅದನ್ನು ಬಿಟ್ಟು ಬೇರೆ ಯಾವುದೇ ದಾಖಲೆಗಳನ್ನು ನೋಡಿರುವುದಿಲ್ಲ. ಸಾಕ್ಷಿ ಮುಂದುವರಿದು ಇತರ ನಿವೇಶನದ ಮಾಲೀಕರ ಕ್ರಯ ಪತ್ರವನ್ನು ನೋಡಿರುತ್ತೇನೆ ಎಂದು ನುಡಿಯುತ್ತಾರೆ. ಆ ಕ್ರಯ ಪತ್ರಗಳು ಯಾರಿಗೆ ಸೇರಿದವು ಮತ್ತು ಯಾವಾಗ ಕ್ರಯ ಪತ್ರಗಳನ್ನು ನೊಂದಣಿ ಮಾಡಲಾಗಿದೆ ಎಂದು ನನಗೆ ಈಗ ನೆನಪಿಲ್ಲ. ಆ ಕ್ರಯ ಪತ್ರಗಳಿಗೆ ಹೊಂದಿ ಖಾತಾ ಇದ್ದದ್ದು ನಾನು ನೋಡಿರುತ್ತೇನೆ ಆದರೆ ಅದು ನನಗೆ ಈಗ ನೆನಪಿಲ್ಲ.

(ಮುಂದುವರಿದ ಪಾಟಿ ಸವಾಲಿಗೆ ಅವಕಾಶ ಕೇಳಿದ್ದರಿಂದ, ಅವಕಾಶ ನೀಡಲಾಯಿತು).

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ ಇದೆ,**

**(ಮಮ್ತಾಜ್)**
**9ನೇ ಅಪರ ನಗರ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರು, ಬೆಂಗಳೂರು.**